**<u>ಸಾಕ್ಷಿಯನ್ನು ದಿನಾಂಕಃ 12-11-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ</u>**

ನನ್ನನ್ನು ಈ ಕೇಸಿನಲ್ಲಿ 3 ನೇ ಪ್ರತಿವಾದಿಯಾಗಿ ಸೇರಿಸಿರುವರು ಅಂದರೆ ಸರಿ. ನಾನು ಈ ಕೇಸಿನಲ್ಲಿ ತಕರಾರು ಸಲ್ಲಿಸಿರುವುದಿಲ್ಲ ಅಂದರೆ ಸರಿ. 2 ಮತ್ತು 4 ನೇ ಪ್ರತಿವಾದಿಗಳು 1 ನೇ ಪ್ರತಿವಾದಿಯ ಮಕ್ಕಳು ಅಂದರೆ ಸರಿ. ನನಗೆ ದಾವಾ ಅಸ್ತಿಯ ಚೆಕ್ಕು ಬಂದಿ ಹೇಳಲಾಗುವುದಿಲ್ಲ. 2012 ನೇ ಸಾಲಿನಲ್ಲಿ ಖರೀದಿ ಪತ್ರದಲ್ಲಿನ ಸರ್ವೆ ನಂಬರನ್ನು ತಿದ್ದುಪಡಿ ಮಾಡಿ ಕೊಡುವಂತೆ ವಾದಿ 1 ನೇ ಪ್ರತಿವಾದಿಯನ್ನು ಕೇಳಿದ ವಿಚಾರ ನನಗೆ ಗೊತ್ತಿರುವುದಿಲ್ಲ. ದಾವಾ ಅಸ್ತಿಯನ್ನು 1 ನೇ ಪ್ರತಿವಾದಿ ವಾದಿಗೆ ನೊಂದಾಯಿತ ಖರೀದಿ ಪತ್ರದ ಮುಖಾಂತರ ಕ್ರಯಕ್ಕೆ ಕೊಟ್ಟಿರುವರು ಅಂದರೆ ನನಗೆ ಗೊತ್ತಿಲ್ಲ. ಆ ಖರೀದಿ ಪತ್ರದಲ್ಲಿ ಸರ್ವೆ ನಂ 106 ಬರೆಯುವ ಬದಲು 100 ಜಿ ಎಂದು ಬರೆದಿದ್ದರು ಅಂದರೆ ನನಗೆ ಗೊತ್ತಿಲ್ಲ.

2. ವಾದಿ ಅವಿದ್ಯಾವಂತ ಅಂದರೆ ನನಗೆ ಗೊತ್ತಿಲ್ಲ. ವಾದಿಯು 1 ನೇ ಪ್ರತಿವಾದಿಯನ್ನು ಸರ್ವೆ ನಂ ತಿದ್ದುಪಡಿ ಮಾಡಿ ಕೊಡಲು ಕೇಳಿದಾಗ 1 ನೇ ಪ್ರತಿವಾದಿ ತನ್ನ ಮಗನಾದ 2 ನೇ ಪ್ರತಿವಾದಿ ಹನುಮಂತಪ್ಪನ ಹೆಸರಿಗೆ ಹಕ್ಕು ಬಿಡುಗಡೆ ಪತ್ರವನ್ನು ಸೃಷ್ಟಿಸಿರುವರು ಅಂದರೆ ಸರಿಯಲ್ಲ. ಸದರಿ ಹಕ್ಕು ಬಿಡುಗಡೆ ಪತ್ರದ ಅಧಾರದ ಮೇಲೆ 2 ನೇ ಪ್ರತಿವಾದಿ ನನ್ನ ಹೆಸರಿಗೆ ಖರೀದಿ ಪತ್ರವನ್ನು ಸೃಷ್ಟಿಸಿ ಬರೆದುಕೊಟ್ಟಿರುವರು ಅಂದರೆ ಸರಿಯಲ್ಲ. ತದನಂತರ ಸ್ವಲ್ಪ ದಿನಗಳ ನಂತರ ನಾನು 2 ಮತ್ತು 4 ನೇ ಪ್ರತಿವಾದಿಗಳ ಹೆಸರಿಗೆ ದಾವಾ ಅಸ್ತಿಗೆ ಸಂಬಂದಿಸಿದಂತೆ ಖರೀದಿ ಪತ್ರವನ್ನು ಬರೆದುಕೊಟ್ಟಿದ್ದೆನು ಅಂದರೆ ಸರಿ.

**ಸಾಕ್ಷಿಯ ಸಹಿ** 12.11.2025

3. ನಾನು ಖರೀದಿ ಪತ್ರ 2 ಮತ್ತು 4 ನೇ ಪ್ರತಿವಾದಿಗಳ ಹೆಸರಿಗೆ ಬರೆದು ಕೊಟ್ಟ ಸಮಯದಲ್ಲಿ ಈ ದಾವೆ ಚಾಲ್ತಿಯಲ್ಲಿತ್ತು ಅಂದರೆ ನನಗೆ ಗೊತ್ತಿಲ್ಲ. ನಾನು ಹನುಮಂತಪ್ಪನಿಂದ ಖರೀದಿಗೆ ತೆಗೆದುಕೊಂಡಾಗಲೂ ದಾವೆ ಚಾಲ್ತಿಯಲ್ಲಿತ್ತು ಅಂದರೆ ನನಗೆ ಗೊತ್ತಿಲ್ಲ. ನಾನು 2 ಮತ್ತು 4 ನೇ ಪ್ರತಿವಾದಿಗಳ ಹೆಸರಿಗೆ ಖರೀದಿ ಪತ್ರವನ್ನು ಬರೆದುಕೊಡುವ ಕಾಲಕ್ಕೆ ನ್ಯಾಯಾಲಯದಿಂದ ಪರವಾನಿಗೆಯನ್ನು ಪಡೆದುಕೊಂಡಿರುವುದಿಲ್ಲ. 1 ನೇ ಪ್ರತಿವಾದಿ ಹಾಗೂ ನಾನು ಒಂದೇ ಕುಲಸ್ತರು ಆದರೆ ಸಂಬಂದಿಕರು ಆಗಿರುವುದಿಲ್ಲ. ನಾನು ಹಾಗೂ ಕರಿಯಪ್ಪ ಸಂಬಂದಿಕರು ಅಂದರೆ ಸರಿಯಲ್ಲ.

4. 1 ನೇ ಪ್ರತಿವಾದಿ ವಾದಿಯ ಹೆಸರಿಗೆ ಬರೆದುಕೊಟ್ಟಿದ್ದ ಖರೀದಿ ಪತ್ರದ ಬಗ್ಗೆ ನನಗೆ ಗೊತ್ತಿತ್ತು ಅಂದರೆ ಸರಿಯಲ್ಲ. ವಾದಿಯ ಹಕ್ಕನ್ನು ನಷ್ಟಗೊಳಿಸಲು ನಾನು ಹಾಗೂ ಪ್ರತಿವಾದಿಗಳು ಮಿಲಾಪಿಯಾಗಿ ಖರೀದಿ ಪತ್ರಗಳನ್ನು ಸೃಷ್ಟಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ದಾವಾ ಸ್ವತ್ತು ಈಗಲೂ ವಾದಿಯ ಸ್ವಾಧೀನ ಅನುಭವದಲ್ಲಿ ಇದೆ ಅಂದರೆ ಇರಬಹುದು. ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**12-11-2025**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 12.11.2025